ಮೌನ ಮುಂದುವರೆಯಿತು. ಕೆಲಕ್ಷಣ ಬಿಟ್ಟು ಶಿಚಿಪ್‌ತ್ಸೋವ್ ಏಕಾಏಕಿ ಮೇಲಕ್ಕೆ ಜಿಗಿದು ಬ್ರಮಾ ಗಿಲ್ನಸ್ಕಿಯ ಕ್ಯಾಪ್ ಕಸಿದುಕೊಂಡುಬಿಟ್ಟ...

'ಗುಡ್‌ಬೈ!... ನಾನು ವ್ಯಾಜ್ಮಾಗೆ ಹೊರಡ್ತಿದ್ದೇನೆ' ಶಿಚಿಪ್‌ತ್ಸೋವ್ ಕ್ಯಾಪ್ ಹಿಡಿದು ಸುಳಿ ತಿರುಗಿಸುವಂತೆ ತಿರುಗಿಸಿ ಹೇಳಿದ...

'ಮತ್ತೆ ಪ್ರಯಾಣಕ್ಕೆ ದುಡ್ಡು?' ಬ್ರಮಾ ಗಿಲ್ನ್‌ಸ್ಕಿ ಕೇಳಿದ

'ಊಂ... ನಾನು ನಡೆದೇ ಹೋಗ್ತೀನಿ...'

'ಹುಚ್ಚು ಹಿಡಿದಿದೆ ನಿನಗೆ...'

ಇಬ್ಬರೂ ಪರಸ್ಪರ ನೋಡಿದರು. ಇಬ್ಬರ ಕಣ್ಣುಗಳಲ್ಲೂ ಒಂದೇ ಚಿತ್ರ, ಆಲೋಚನೆ ಕದಲಿರಬೇಕು. ಗಡಿಗಳಿಲ್ಲ ಬಯಲು... ಕೊನೆ ಕಾಣದ ಕಾಡು... ದಟ್ಟ ಪೊದೆ...

'ನಿನ್ನ ತಲೆಯಿಂದ ಬುದ್ಧಿ ಹಾರಿಹೋಗಿದೆ ಅಂತ ಗೊತ್ತಾಗ್ತಿದೆ... ಒಳ್ಳೆ ಮುದುಕ ನೀನು... ನಾನು ನಿನಗೆ ಒಂದು ಮಾತು ಕೇಳಲಾ? ಮೊದಲು ನೀನು ಹಾಸಿಗೆ ಮೇಲೆ ಒರಗಿಕೊ... ಆಮೇಲೆ ಒಂದಿಷ್ಟು ಬ್ರಾಂದಿನೋ, ಟೀನೋ ಕುಡಿ–ಮೈಯಿಂದ ಒಂದಿಷ್ಟು ಬೆವರು ಚಿಮ್ಮಿ ಬರೋದಕ್ಕೆ. ಇರು, ಈಗ ನಾನು ಬ್ರಾಂದಿ ಎಲ್ಲಿಂದ ತರಲಿ?'

ಬ್ರಮಾ ಗಿಲ್ನ್‌ಸ್ಕಿ ಒಂದು ಕ್ಷಣ ಯೋಚಿಸಿದ. ಆಮೇಲೆ ತ್ರಿಸ್ರಿವಿಕೋವ್ ಎಂಬ ಅಂಗಡಿಯಾಕೆಯ ಬಳಿಗೆ ಹೋಗಲು ಮನಸ್ಸು ಮಾಡಿ ಹೊರಟ. ಯಾರಿಗೆ ಗೊತ್ತು... ಅವಳಲ್ಲಿ ಒಂದಿಷ್ಟು ಹರಳೆಣ್ಣೆ, ಬ್ರಾಂದಿ ಸಿಗಬಹುದು. ಬಹುಶಃ ಹೆಣ್ಣು ತನ್ನ ಭಾವನೆ ಅರ್ಥೈಸಿಕೊಂಡು ಕೊಡಬಹುದು ಎಂದೆಲ್ಲ ಯೋಚಿಸಿ ಹೊರಟ. ಆಮೇಲೆ ಅರ್ಧ ಗಂಟೆ ಬಳಿಕ ಬ್ರಾಂದಿ ಬಾಟಲ್ ಹಾಗೂ ಹರಳೆಣ್ಣೆಯೊಂದಿಗೆ ಬಂದ.

ಶಿಚಿಪ್‌ತ್ಸೋವ್ ಹಿಂದಿನಂತೆ ಹಾಸಿಗೆ ಮೇಲೆ ಅಲುಗಾಡದೆ ಹಾಗೇ ಕುಳಿತು ನೆಲವನ್ನೇ ದಿಟ್ಟಿಸುತ್ತಿದ್ದ. ಗಿಲ್ನ್‌ಸ್ಕಿ ಕೊಟ್ಟ ಹರಳೆಣ್ಣೆಯನ್ನ ಕುಡಿದ. ತಾನು ಏನು ಮಾಡ್ತಿದ್ದೇನೆ ಅನ್ನುವ ಅರಿವಿಲ್ಲದೆಯೇ ಕುಡಿದುಬಿಟ್ಟ. ಅನಂತರ ಸ್ವಯಂಪ್ರೇರಿತನಾಗಿ ಮೇಲೆದ್ದು ಬಂದು ಮೇಜಿನ ಎದುರು ಕೂತು ಟೀ ಹಾಗೂ ಬ್ರಾಂದಿ ಕುಡಿದ. ಯಾಂತ್ರಿಕವಾಗಿ ಕುಡಿಯುತ್ತ ಇಡೀ ಬಾಟಲ್ ಖಾಲಿ ಮಾಡಿದ.

ಅನಂತರ ಗಿಲ್ನ್‌ಸ್ಕಿಗೆ ತನ್ನನ್ನು ಮತ್ತೆ ಹಾಸಿಗೆ ಮೇಲೆ ಮಲಗಿಸಲು ಅನುವು ಮಾಡಿಕೊಟ್ಟ. ಗಿಲ್ನ್‌ಸ್ಕಿ, ಶಿಚಿಪ್‌ತ್ಸೋವ್‌ಗೆ ಹೊದಿಸಿ ಚೆನ್ನಾಗಿ ಮಲಗಲು ಹೇಳಿ ಹೊರನಡೆದ.

ರಾತ್ರಿಯಾಯಿತು. ಶಿಚಿಪ್‌ತ್ಸೋವ್ ಹೆಚ್ಚು ಬ್ರಾಂದಿ ಕುಡಿದಿದ್ದರೂ ಮಲಗಿರಲಿಲ್ಲ. ಹಾಗೇ ಅಲುಗಾಡದೆ ಹಾಸಿಗೆ ಮೇಲಿದ್ದುಕೊಂಡು ತಾರಸಿಯ ಕತ್ತಲನ್ನೇ ದಿಟ್ಟಿಸುತ್ತಿದ್ದ. ಆಮೇಲೆ ಕಿಟಕಿ ಆಚೆಗೆ ಕಣ್ಣು ನೆಟ್ಟು ಚಂದ್ರನನ್ನ ನೋಡಿದ. ಮತ್ತೆ ತನ್ನ ದೃಷ್ಟಿ ಬದಲಿಸಿ ಹಾಗೇ ಕಣ್ಣು ಬಿಟ್ಟುಕೊಂಡು ಬೆಳಗಿನವರೆಗೆ ಕಾಲ ಕಳೆದ. ಬೆಳಗ್ಗೆ ಮ್ಯಾನೇಜರ್ ಜುಕೋವ್ ಒಳಗೆ ಬಂದ.

'ಕಾಯಿಲೆ ಮಲಗೋವಂಥದ್ದು ಏನು ನಿನ್ನ ತಲೆಹೊಕ್ತು ನನ್ನ ದೊರೆ' ಎನ್ನುತ್ತ ಶಿಚಿಪ್‌ತ್ಸೋವ್‌ನ ಮೂಗಿನ ಮೇಲೆ ಬೆರಳಾಡಿಸಿ ಕಚಗುಳಿ ಇಟ್ಟ.

ಅನಂತರ, 'ಅರೆರೆ ನಿನ್ನ ಹಾಗೆ ದೇಹದಾರ್ಢ್ಯ ಇರೋರು ಕಾಯಿಲೆ ಮಲಗಲೇ ಬಾರದು. ನಾಚಿಕೆ, ನಾಚಿಕೆ ಆಗಬೇಕು ನಿನಗೆ... ಒಂದು ವಿಚಾರ ಗೊತ್ತಾ? ನೀನು ಕಾಯಿಲೆ ಮಲಗಿದ್ದೀಯ ಅಂತ ಗೊತ್ತಾದ ಕೂಡಲೆ ನಾನು ಕೊಂಚ ಹೆದರಿದೆ. ಅಲ್ಲ ನಮ್ಮ ಸಂಭಾಷಣೆ ನಿನ್ನ ಮೇಲೆ ಈ ಪರಿ ಪರಿಣಾಮ ಬೀರಿರಬಹುದೇ ಅಂತ ಆಶ್ಚರ್ಯಪಟ್ಟೆ. ಓ... ನನ್ನ ಪ್ರೀತಿಯ